ಕವಿತೆ



ಎಂ.ಎಸ್. ಮೂರ್ತಿ

ಕಲೆ: ವಿಶ್ವನಾಥ್ ಎ.ಎಸ್.

# ಜನ ನನ್ನನ್ನು ಟಾಲ್‌ಸ್ಟಾಯ್ ಎಂದು ಕರೆಯುತ್ತಾರೆ



ಚಳಿಯೇ ಕೌಚಿ ಕುಳಿತಂತೆ ಮುದುಕ ಕುಳಿತಿದ್ದ ಬೆಳಗು
ರಾತ್ರಿಯ ಮಧ್ಯದ ಮಧ್ಯಾಹ್ನದಲ್ಲಿ ಉಳಿದ ಕಾಲದ ದೇಶದಲ್ಲಿ ಮುದುಡಿ
ಕುಳಿತಿದ್ದ ಹಣ್ಣು ಮುದುಕ ಕಳೆದ ಕಾಲ

ಅವನಿಗೆ ಮರೆತುಹೋಗಿದೆ ಎಲ್ಲ
ನೆನಪುಗಳ ಜನ ಕರೆದರು
ಟಾಲ್‌ಸ್ಟಾಯ್
ಮರೆತುಹೋಗಿದ್ದ ಅವನನ್ನೇ
ನೆನಪು ಮಾಡಿಕೊಡುತ್ತಿದ್ದರು ಜನರೇ
ನೆನಪುಗಳು ಶಾಂತಿಯೇ ಯುದ್ಧವನು ಆಕ್ರಮಿಸಿದಂತೆ
ಕುಳಿತಿದ್ದ ಮುದುಕ ಹಸಿದ ಹೊಟ್ಟೆ ಮುಂದೆ ಹಸಿವೆಯೇ ಅನ್ನ
ಉಂಡು ತೃಪ್ತಿಗೊಂಡಿತು ಸ್ವಾದ, ಪರಿಮಳ ತುಂಬಿ ಮನ,
ಹಗುರ ಜೀವನ ತೀರಿತೆಲ್ಲ ಹಗೆ...

ಜನ ನನ್ನನ್ನು ಟಾಲ್‌ಸ್ಟಾಯ್ ಎಂದು ಕರೆಯುತ್ತಾರೆ.

ಹಗಲಿರುಳು ಕಾದು ಕಾಳಗದಲಿ ದಣಿದು
ಭೂತ
ಕೈ ಮುಗಿದು
ಭವಿತಾರಂಭದ ಕ್ಷಣ ವರ್ತಮಾನ
ಸೌಂದರ್ಯದ ಋಣ
ಕಾಲ ರೂಪದ ನಿರ್ಗುಣಗ್ರಾಹಿ ಕಂಡ ಹಗಲು
ಚೀಲ ತುಂಬಿ ಹೊರಲಾರದ ಭಾರ ಹೆಗಲು

ದಾರಿ ಸಾಗಿದಷ್ಟು ದೂರ

ಎಲ್ಲಿಗೋ
ಹೊರಡಲಣಿಯಾಗಿ ಮನಸು
ನೆರಳಾದರೂ ಬರಬಹುದು ಜೊತೆಗೆ